**ಶಿಕ್ಷಣ** | **ಹಳೆಯಂಗಡಿ: ತೊಗಲುಬೊಂಬೆ ಕಾರ್ಯಾಗಾರದ ಸಮಾರೋಪ**

# ಶಿಕ್ಷಣದ ಸವಾಲುಗಳಿಗೆ ಸುಲಭ ಮಾರ್ಗ: ಪದ್ಮಿನಿ ರಂಗರಾಜನ್

**ಹಳೆಯಂಗಡಿ,** ಡಿ. 24: ಶಿಕ್ಷಣದಲ್ಲಿ ಮಕ್ಕಳನ್ನು ಶೈಕ್ಷಣಿಕವಾಗಿ ಅರ್ಹರನ್ನಾಗಿಸಲು ಕೇವಲ ಪುಸ್ತಕದ ಪಾಠ ಸಾಲದು ಬದಲಾಗಿ ತೊಗಲುಗೊಂಬೆಯ ಕಥಾನಕ ಶಿಕ್ಷಣದಿಂದಲೂ ಸುಲಭವಾಗಿ ಕಲಿಸಲು ಸಾಧ್ಯವಿದೆ. ಕೌಶಲದ ಶಿಕ್ಷಣದ ತರಬೇತಿಯನ್ನು ಪಡೆದುಕೊಂಡು ಉಳಿದವರನ್ನು ಕೌಶಲರನ್ನಾಗಿ ಮಾಡುವ ಇಂತಹ ಕಾರ್ಯಾಗಾರ ಶ್ಲಾಘನೀಯ ಎಂದು ಹೈದರಾಬಾದ್‌ನ ಸ್ಫೂರ್ತಿ ಥಿಯೇಟರ್‌ನ ನಿರ್ದೇಶಕಿ ಪದ್ಮಿನಿ ರಂಗರಾಜನ್ ಅವರು ಹೇಳಿದರು.



ತೊಗಲು ಬೊಂಬೆ ವಿಶೇಷ ಕಾರ್ಯಾಗಾರದ ಸಮಾರೋಪದಲ್ಲಿ ಬೊಂಬೆಯೊಂದಿಗೆ ಶಿಬಿರಾರ್ಥಿಗಳು.

ಹಳೆಯಂಗಡಿ ಯುಬಿಎಂಸಿ ಶಾಲೆಯಲ್ಲಿ ಪಡುಪಣಂಬೂರು ಕ್ಲಸ್ಟರ್ ಮಟ್ಟದ ಶಿಕ್ಷಕರಿಗೆ ಶಿಕ್ಷಣದಲ್ಲಿ ಅಳವಡಿಸಿ ಕೊಳ್ಳಲು ನಡೆದ ತೊಗಲು ಬೊಂಬೆ ವಿಶೇಷ ಕಾರ್ಯಾಗಾರದ ಸಮಾರೋಪದಲ್ಲಿ ಅವರು ಮಾತನಾಡಿದರು.

## ಮಕಳಿಗೆ ಸಮಾಜಮುಖಿ ಪಾಠ ಅಗತ್ಯ

ಕಾರ್ಯಾಗಾರದ ಮುಖ್ಯ ಸಂಘಟಕಿ ಪಡುಪಣಂಬೂರು ಕ್ಲಸ್ಟರ್‌ನ ಸಿಆರ್‌ಪಿ ಕುಸುಮಾ ಕೆ.ಪಿ. ಮಾತನಾಡಿ, ಮಕ್ಕಳ ಭಾವನೆಗಳಿಗೆ ಗೊಂಬೆಗಳ ಮೂಲಕ ಮಾತನಾಡಲು ಸಾಧ್ಯವಿದೆ. ಮೊಬೈಲ್ ಮೋಹವನ್ನು ತ್ಯಜಿಸುವ, ಬೊಂಬೆಯೊಂದಿಗೆ ಮಾತನಾಡುವ ಗುಣ ವಿಶೇಷತೆ ಈ ತೊಗಲು ಬೊಂಬೆಯಲ್ಲಿದೆ. ಮಕ್ಕಳನ್ನು ಪರಿಸರ ಸ್ನೇಹಿ, ಕೌಟುಂಬಿಕ ಪ್ರೀತಿ, ಸಮಾಜ ಮುಖಿಯಾಗುವಂತಹ ಪಾಠ ಇಂದು ಅಗತ್ಯವಾಗಿದೆ ಎಂದರು.

ಕಾರ್ಯಾಗಾರದ ಶಿಬಿರಾರ್ಥಿಗಳಾದ ನಿತ್ಯಾನಂದ, ಪೃಥ್ವಿ, ಪಾವತೀ ಪ್ರಶಾಂತ್, ವಸಂತಿ ಟೀಚರ್ ಕಾರ್ಯಾಗಾರದಲ್ಲಿನ ತಮ್ಮ ಅನಿಸಿಕೆ ಯನ್ನು ವ್ಯಕ್ತಪಡಿಸಿದರು.

ಕಾರ್ಯಾಗಾರದ ಸಂಪೂರ್ಣ ವೆಚ್ಚವನ್ನು ಭರಿಸಿ, ಸಂಯೋಜಿಸಿದ ಕುಸುಮಾ ಅವರನ್ನು ವಿಶೇಷವಾಗಿ ಗೌರವಿಸಲಾಯಿತು.

ಶಿಬಿರಾರ್ಥಿಗಳು ತಯಾರಿಸಿದ ಗೊಂಬೆಗಳನ್ನು ಪ್ರದರ್ಶಿಸಲಾಯಿತು. ಕ್ಲಸ್ಟರ್‌ನ ವಿವಿಧ ಶಾಲೆಯ 28 ಶಿಕ್ಷಕರು ಭಾಗವಹಿಸಿದರು. ಹಳೆಯಂಗಡಿ ಸಿ.ಎಸ್.ಐ. ಚರ್ಚ್‌ನ ಸಭಾ ಪಾಲಕ ವಂ। ವಿನಯಲಾಲ್ ಬಂಗೇರ ಅವರು ಅಧ್ಯಕ್ಷತೆ ವಹಿಸಿದ್ದರು.

ಯುಬಿಎಂಸಿ ಶಾಲೆಯ ಪ್ರಭಾರ ಮುಖ್ಯ ಶಿಕ್ಷಕ ಶಿವರುದ್ರಪ್ಪ, ತಾಲೂಕು ಸಂಪನ್ಮೂಲ ವ್ಯಕ್ತಿ ವಿಲ್ಮಾ ಕ್ರಾಸ್ತಾ, ಮಕ್ಕಳ ಧ್ವನಿಯ ಹೋರಾಟಗಾರ್ತಿ ನಂದಾ ಪ್ಯಾಯಸ್ ಶುಭ ಹಾರೈಸಿದರು.

ಪಂಜ ಸ.ಶಾ.ಯ ಶಿಕ್ಷಕಿ ವಸಂತಿ ಸ್ವಾಗತಿಸಿ, ತೋಕೂರು ತಪೋವನದ ಡಾ। ರಾಮಣ್ಣ ಶೆಟ್ಟಿ ಆಂ.ಮಾ. ಶಾಲೆಯ ಶಿಕ್ಷಕಿ ರಾಜೇಶ್ವರೀ ವಂದಿಸಿ, ಹಳೆಯಂಗಡಿ ಯುಬಿಎಂಸಿ ಶಾಲೆಯ ಶಿಕ್ಷಕಿ ಮೋಹಿನಿ ಕಾರ್ಯಕ್ರಮ ನಿರೂಪಿಸಿದರು.

ಉದಯವಾಣಿ
Wed, 25 December 2019
https://epaper.udayavani.com/c/47260625